## ಕಳೆದ ಸಂಚಿಕೆಯಲ್ಲಿ



ಮಲ್ಲನ ತೋಟದಲ್ಲಿ ಸಿಕ್ಕ ಚೀಲದಲ್ಲಿ ಸಿದ್ಧನ ಹೆಣ ಪತ್ತೆಯಾಯಿತು. ತನ್ನ ಗಂಡ ಕೊಲೆಯಾದುದು ತಿಳಿದ ಅವನ ಹೆಂಡತಿ ದ್ಯಾವಕ್ಕ ನೆಲಮುಗಿಲು ಒಂದಾಗುವಂತೆ ರೋದಿಸತೊಡಗಿದಳು. ಊರಿಗೆ ಊರೇ ಅವಳ ದುಃಖಕ್ಕೆ ಜೊತೆಯಾಯಿತು. ಪೊಲೀಸರು ಅನುಮಾನ ಬಂದವರನ್ನೆಲ್ಲ ಠಾಣೆಗೆ ಕರೆದೊಯ್ದು ತಮ್ಮದೇ ಶೈಲಿಯಲ್ಲಿ ವಿಚಾರಿಸಿದರು. ಊರು ನಿಧಾನಕ್ಕೆ ಸಿದ್ಧನನ್ನು ಮರೆಯತೊಡಗಿದರೂ, ಈಗ ದೆವ್ವದ ರೂಪದಲ್ಲಿ ಅವನ ನೆನಪು ಮರುಕಳಿಸಿತ್ತು. ಹೀಗೆ ದಿನಗಳು ಉರುಳುತ್ತಿರುವಾಗ ಒಂದು ದಿನ ರೊಚ್ಚಿಗೆದ್ದ ಬಸವ ದಿಕ್ಕೆಟ್ಟವನಂತೆ ಓಡತೊಡಗಿತು. ಬಸವನ ಎದುರಿಗೆ ಸಿಕ್ಕವರು ಉಳಿಯುವುದುಂಟೆ? ಎಲ್ಲರ ಪಾಲಿಗೂ ತಾಯಿ ಎನ್ನಿಸಿಕೊಂಡಿದ್ದ ಸೂಲಗಿತ್ತಿ ಮಲೆಯಮ್ಮನಿಗೀಗ ಕಣ್ಣು ಕಾಣದು. ಅವಳತ್ತ ಬಸವ ಸಾಗತೊಡಗಿದಾಗ ಊರು ಗಾಬರಿಯಾಗತೊಡಗಿತು. ಆದರೆ, ಆ ತಾಯಿಯನ್ನು ಏನೂ ಮಾಡದ ಬಸವ ದಿಕ್ಕು ಬದಲಿಸಿತು. ಗಾಡಿಯಲ್ಲಿ ಬರುತ್ತಿದ್ದ ಮಲ್ಲ, ಗಾಡಿಯೊಂದಿಗೆ ಉರುಳಿಬಿದ್ದು ತೀವ್ರವಾಗಿ ಗಾಯಗೊಂಡ. ಮಲ್ಲನಿಂದ ತೊಂದರೆಗೊಳಗಾದವರು ಕೂಡ, ಸಾವುಬದುಕಿನ ನಡುವೆ ಹೋರಾಡುತ್ತಿದ್ದವನನ್ನು ಉಳಿಸುವ ಪ್ರಯತ್ನದಲ್ಲಿ ತೊಡಗಿದರು. ಈ ಸೋಜಿಗವನ್ನು ಗಮನಿಸುತ್ತಿದ್ದ ಕಡಾಣಿ ಮತ್ತು ನರಿಗೆ ಹಳೆಯ ಪ್ರೇಮಕಥನವೊಂದು ನೆನಪಿಗೆ ಬಂತು. ಆ ದುರಂತ ಪ್ರೇಮಕಥೆಯಲ್ಲಿ ಸಿದ್ಧನೇ ಕಥಾನಾಯಕ. ಮಲ್ಲನ ಹೆಂಡತಿ ಚಂದ್ರಳೇ ನಾಯಕಿ.

ಅಂದ ಮಾತಿಗೆ ಗವಿರಂಗಣ್ಣ 'ಅವರಿಗೇನು ಇದು ಹೊಸ್ದೇನ್ಲ, ಇಂಗೋಗಿ ಅಂಗೆ ಬತ್ತವೆ' ಅಂದ. 'ಆದ್ರೆ ಇದು ನಮ್ಮೂರ್ಗೆ ಹೊಸ್ದು. ಈ ಕೊಲೆ ಯಂಗಾಯ್ತು? ಯಾರು ಮಾಡಿದ್ರು? ಗೊತ್ತೇ ಆಗ್ಲಿಲ್ಲ' ಅಂದ ನಿಂಗಣ್ಣನ ಆ ಮಾತಿಗೆ ತಟ್ಟನೆ ಗವಿರಂಗಣ್ಣ 'ಅಯ್ಯೋ ಆಗ ಊರು ಒಣಗಿದ ಬಿದಿರು ಕಾಡಿನಂತಾಗಿತ್ತು. ಒಂದು ಕಿಡಿ ತಾಗಿದರೆ ಸಾಕು ಊರಿಗೂರೇ ಹತ್ತಿ ಉರೀತಿತ್ತು. ಊರು ಸೂಕ್ಷ್ಮವಾಗತೊಡಗಿದಂತೆ ಕೊಲೆಗಾರರನ್ನ ಪೊಲೀಸ್ನವ್ರು ಎತ್ತಾಕಂಡೋಗಿದ್ರು' ಅಂದ ಗವಿರಂಗಣ್ಣನ ಮಾತಿಗೆ ನಿಂಗಣ್ಣನು 'ಅಯ್ಯೋ ಆಗಂತೂ ಅದೇನ್ ತಮಟೆ, ಆಗ ತಮಟೆಗೆ ಬೀಳ್ತಿದ್ದ ಒಂದೊಂದೇಟೂ ಕೊಲೆಗಡುಕರ ಎದೆ ನಡುಗುಸ್ತಿತ್ತು' ಎಂದನು.

'ಅದೇನಾರ ಆಗ್ಲಿ ಆ ಸಿದ್ದಣ್ಣಂದು ಆ ಚಂದ್ರುನ್ ಸಂಬಂಧ ಏನು ನಿಜ್ವಾ?' ಎಂದು ಬಾಗಮ್ಮ ಕೇಳುತ್ತಿದ್ದಂತೆ ಮಳ್ಳಕ್ಕ ಟೀ ಕೊಡಲು ಹೊರಗೆ ಬಂದವಳು 'ನೀನೂ ಸೋಜುಗುದ್ ಮಾತಾಡ್ತಿ ಕಣೆ. ಯಾಕೆ ನಿಂಗ್ ಗೊತ್ತಿಲ್ವಾ?' ಅನ್ನುತ್ತಾ ಟೀ ಕೊಟ್ಟು, 'ನೀನೂ ಆಡ್ತೀ ಕಣೇಳು' ಎಂದು ಒಳಗೆ ಹೋಗುತ್ತಾ 'ನಿನಗೆ ಏನ್ ಗೊತ್ತಿಲ್ಲ ಹೇಳು' ಎಂದಳು.

ಅದಕ್ಕೆ ಬಾಗಮ್ಮ 'ಇಲ್ಲ ಕಣವ್ವ... ಅಮ್ಮಯ್ಯನ ಸತ್ವಾಗ್ಲೂ ಏನೂ ಗೊತ್ತಿಲ್ಲ, ಈ ಚಂದ್ರ ಸಿದ್ದಣ್ಣನ್ನ ಕೈಗಾಕ್ಕಂಡಿದ್ಲಂತೆ ನಿಜ್ವಾ?' ಅಂದಳು. ಗುಟ್ಟು ರಟ್ಟು ಮಾಡಲು ಆಗಾಗ ತುಟಿ ತೂಬು ತೆರೆಯುತ್ತಿತ್ತು.

ಆ ಮಾತಿಗೆ ಮಳ್ಳಕ್ಕನು ನಾಚಿಕೊಂಡವಳಂತೆ ಒಳಗೆ ಹೋದಳು.

ಮುಂದುವರೆದ ತಮ್ಮಯ್ಯಣ್ಣ 'ಅಷ್ಟೇ ಅಲ್ಲ ಬಾಗಮ್ಮ, ಎತ್ತಿನ ಗಾಡಿ ಮೇಲೆ ಸಿದ್ದಣ್ಣ ಆವಕ್ಕನ್ನ ಕೂರುಸ್ಕಂಡು, ಉತ್ಸವ, ಜಾತ್ರೆ ಅಂತ ಹೋಗ್ತಿದ್ರೆ ಸುಂದರ ಶರೀರಗಳೆರಡು ಒಂದಾಗಿ ಚಂದದಲಿ ಮೈ ಮರೆವುದ ನೋಡುವುದೇ ಆನಂದ ಯೋಗ. ಜನ ನೋಡಿ, ಮುಖಕ್ಕೆ ಅದೇನಚ್ಚತಳೋ ಅಷ್ಟು ಕೆಂಪು ಹೂವಿನಂಥಾ ಮೈಬಣ್ಣ, ಆ ಕಮಲದಂಥಾ ಕಣ್ಣುಗಳು, ಉದ್ದದ ಕಪ್ಪು ರೇಷ್ಮೆಯಂಥಾ ಕೂದಲು, ನೋಡಿದರೆ ಸೌಂದರ್ಯ ರಾಶಿಯೇ ಗಾಡಿಯಲ್ಲಿ ಸಾಗಿಹೋದಂತೆ ಅನ್ನಿಸುತ್ತಿತ್ತು' ಅಂದ ಮಾತಿಗೆ ಅಲ್ಲೇ ಇದ್ದ ನಿಂಗಣ್ಣನು, 'ಅಷ್ಟೇ ಅಲ್ಲ ಕಣೋ... ಚಳಿಗೆ ಮೈ ಚರ್ಮ ಕೆಡದಂತೆ ಅವಳ ಮೈಗೆಲ್ಲಾ ಬಾದಾಮಿ ಎಣ್ಣೆ ತಿಕ್ಕೀ ತಿಕ್ಕೀ ಪರಿಮಳ ಇದಿಯೋ ಇಲ್ಲವೋ ಎಂದು ಮೂಸಿ ನೋಡಿ ಸಿದ್ದಣ್ಣ ಗಾಡಿ ಹತ್ತಿಸುತ್ತಿದ್ದನಂತೆ. ಬದುಕು ನಾಲ್ಕು ದಿನವಾದ್ರೂ ಅಂಗೇ ಬದುಕಿದ್ದ ಕಂಡ್ಲಾ? ಬದುಕು ಅಂದ್ರೆ ಅವಂದು. ಈ ಜೀವಗಳು ಗಾಡಿಯಲ್ಲಿ ಹೋಗುತ್ತಿದ್ದರೆ ರಾಧಾ ಕೃಷ್ಣರಂತೆ ಕಾಣುತ್ತಿದ್ದರಂತೆ' ಅಂದ.

ನಿಂಗಣ್ಣನ ಮಾತಿಗೆ 'ತವರಿಗೆ ಹೋದಾಗ ಸಂತೆ ಜಾತ್ರೆಯಲ್ಲಿ ಗುಟ್ಟಾಗಿ ಕುಸುರಿ ಕೆಲಸ ಮಾಡಿದ್ದ ಬಟ್ಟೆಗಳನ್ನು ಸಿದ್ದನ ಹೆಂಡತಿ ಮಗನಿಗೂ ಆ ಚಂದ್ರ ತರುತ್ತಿತ್ತಂತೆ' ಎಂದು ಬಾಗಮ್ಮ ಹೇಳಿದಳು.

ಎಲ್ಲವನ್ನೂ ಕೇಳಿಸಿಕೊಂಡ ಗವಿರಂಗಣ್ಣ 'ಇಷ್ಟೆಲ್ಲಾ ಆದರೂ ಊರಲ್ಲಿ ಚಂದ್ರನ, ಹಾದರ ಮಾಡಿತ್ತು ಎಂದು ಯಾರೂ ಊಳಿಡಲಿಲ್ಲ. ಅವಳು ಅಸಾಧಾರಣ ಪ್ರೇಮಿ. ರಸಿಕಳೂ ಆಗಿದ್ದಳು. ಹುಚ್ಚು ಸಂಪ್ರದಾಯಗಳಲ್ಲಿ ನಂಬಿಕೆ ಇರಲಿಲ್ಲ. ಚಂದ್ರ ಮಾತ್ರ ಊರಲ್ಲಿ ಯಾರ ಕಣ್ಣಿಗೂ ಕಂಡಿರಲಿಲ್ಲ. ಅದು ಈ ಕ್ಷಣದ್ದೇನಲ್ಲ. ಯಾವತ್ತೂ ಚಂದ್ರ ಮಲ್ಲನ ಜೊತೆ ಹೋಗಿದ್ದಿಲ್ಲ. ಎಲ್ಲೂ ಬಂದಿದ್ದಿಲ್ಲ. ಸಿದ್ದನ ಕೊಲೆಯಾದ ಮೇಲೆ ಊರಿನ ಜನ ಚಂದ್ರನನ್ನು ಅಷ್ಟಾಗಿ ಎಲ್ಲೂ ಕಂಡಿರಲಿಲ್ಲ. ಚಂದ್ರ ಯಾರಿಗಾದರೂ ಎದುರು ಸಿಕ್ಕರೆ ಊರ ಜನ ಚಂದ್ರನನ್ನು ಯಾರೂ ಕಂಡುಹಿಡಿಯುತ್ತಿರಲಿಲ್ಲ. ಅಷ್ಟರ ಮಟ್ಟಿಗೆ ಈ ಚಂದ್ರನ ಮುಖ ಊರ ಮಂದಿಗೆ ಮರೆತೇಹೋಗಿತ್ತು. ಹಬ್ಬದ ದಿನಗಳಲ್ಲಿ ಊರ ತಳವಾರರು, ಕಾಲೋನಿಯ ಹೆಂಗಸರು ಕಾಯಿ ಕೇಳಲು ಹೋದಾಗ ಚಂದ್ರ ತಲೆ ತುಂಬ ಸೆರಗು ಹೊದ್ದು ಮಸಕು ಮಸಕಾಗಿ ಕಂಡಿದ್ದುಂಟು. ಅದ್ಯಾವಾಗಲೋ ಈ ಮಲೆಯಮ್ಮನ ಮಗಳು ಹುಚ್ಚಮ್ಮ ಕುಕ್ಕೆ ಹೊತ್ತು ಹೋದಾಗ ಅವ್ವ ನೀವೆಲ್ಲಿ ಹಬ್ಬ ಜಾತ್ರೆ ತೇರು ಕಳಸ ಊರಲ್ಲಿ ಎಲ್ಲೂ ಕಾಣಲ್ಲ' ಎಂದು ಕೇಳಿದ್ದಳಂತೆ.

'ಅಯ್ಯೋ ಆ ನನ್ನ ಸೌಭಾಗ್ಯ ಹೋಗಿ ಬಹಳ ವರ್ಷಗಳಾದವು' ಎಂದು ವಿಷಾದದ ಮಾತನಾಡಿ ಮರೆಯಾಗಿತ್ತಂತೆ. ಅಲ್ಲಿದ್ದವರು ಚಂದ್ರನಿಗೆ ಏನಾಯಿತೋ ಊರಲ್ಲಿ ಒಬ್ಬರಿಗೂ ತಿಳಿಯಲಿಲ್ಲ ಎಂದು ಅನುಮಾನ ವ್ಯಕ್ತಪಡಿಸಿದರು. ಅವರ ಮಾತಿಗೆ ಗವಿರಂಗಣ್ಣ

ಸಿದ್ದನ ಬಿಟ್ಟು ಚಂದ್ರನಿಲ್ಲ
ಚಂದ್ರನ ಬಿಟ್ಟು ಸಿದ್ದನಿಲ್ಲ
ಎಂದು ನಿಟ್ಟುಸಿರಾದ.

ನಿಂಗಣ್ಣನಿಗೆ ಅಂದು ರಾತ್ರಿ ತೋಟದಲ್ಲಿ ನಡೆದ ಘಟನೆ, ಮಲ್ಲನ ಎತ್ತಿನ ಗಾಡಿ ಪಲ್ಟಿ ಹೊಡೆದ ದುರಂತದ ಘಟನೆ ಅವನ ಮನಸ್ಸಿನೊಳಗೆ ಒಂದು ತಾಕಲಾಟವನ್ನುಂಟು ಮಾಡಿದ್ದವು. ಜನರೊಟ್ಟಿಗಿದ್ದನಾದರೂ ಮಾತನಾಡಲು ಅಂಥಾ ಉತ್ಸುಕತೆ ಅವನಲ್ಲಿರಲಿಲ್ಲ. ಜೀವ ಅದುರಿದಂತೆ ತಲ್ಲಣಗೊಳ್ಳುತ್ತಾ, ಗುಂಪಿನೊಳಗಿದ್ದರೂ ಒಂಟಿತನ ಅವನಲ್ಲಿ ಮನೆ ಮಾಡಿತ್ತು. ಅವನು ಅನುಭವಿಸುತ್ತಿದ್ದ ಯಾತನೆಯನ್ನು ಗುಂಪಿನಲ್ಲಿ ಕಂಡ ಮೂರ್ತಿಗೆ ಹೇಳಬೇಕೆನಿಸಿದರೂ ಹೇಳಿದರೆ ಅಷ್ಟೊತ್ತಿನ ರಾತ್ರಿ ಅಲ್ಲಿಗ್ಯಾಕೆ ಹೋಗಿದ್ದೆ, ಮೈ ಬಗ್ಸಿ ದುಡೀಲೆ ಅಂದುಬಿಟ್ಟರೆ? ಅನ್ನುವ ಅಂಜಿಕೆಯಿಂದ ಅಂತರ್ಮುಖಿಯಾಗಿದ್ದವನು ಹೇಳದೆ ಕೇಳದೆ ಎದ್ದು ಹೊರಟಿದ್ದ. ಅವನ ಹಿಂದೆ ಒಬ್ಬೊಬ್ಬರೇ ಮರೆಯಾದರು.

* * *

ಮನೆಗೆ ಬಂದ ನಿಂಗಣ್ಣನು 'ಬೀಡಿಗೆ ಕಾಸು ಕೊಡು' ಎಂದು ಹೆಂಡತಿಯನ್ನು ಕೇಳಿದನು. ಅವನ ಹೆಂಡತಿ ಆ ಮಾತು ಕೇಳಿದ್ದೇ ತಡ ಕಿಡಿ ಕಿಡಿ ಬೆಂಕಿಯಾಗಿ, 'ನೋಡೀಗ, ನನ್ನ ಬಾಯಿಗೆ ಹಸನಾಗಿ ಬತ್ತವೆ' ಅಂದು ಸಿಡಿದಳು. ಅವಳು ಸಿಡಿಮಿಡಿಗೊಂಡರೂ ಇವನ ಚಟ ಬಾಧಿಸತೊಡಗಿ, ಮತ್ತೆ ಮತ್ತೆ ಬೀಡಿಗೆ ಕಾಸು ಕೇಳುತ್ತಾ ಆಗ ಕೊಡ್ತಿನಿ, ಈಗ ಇಂಗೋಗಿ ತಂದು ಕೊಡ್ತಿನಿ, ಸಣ್ಣ ಮಳ್ಳಯ್ಯ ನಾಳೆ ಬಂದು ತಕಂಡು ಹೋಗು ಅಂದವನೆ' ಅಂತ ಏನೇನೋ ಕಾರಣ ಹೇಳುತ್ತಾ ಅವನ ಹೆಂಡತಿಗೆ ಕಾಸಿಗಾಗಿ ಪೀಡಿಸುತ್ತಿದ್ದ. ಗಂಡ ಇಷ್ಟೆಲ್ಲ ಗ್ವಾಗರೆದಿದ್ದು ಇವತ್ತೇ. ಆದರೂ ಮುಂಚಿನಷ್ಟು ಅವನ ದನಿಯಲ್ಲಿ ಗಡಸು ಇರಲಿಲ್ಲ, ಮಾತಲ್ಲಿ ಕೋಪ ಇರಲಿಲ್ಲ. ಇದನ್ನೆಲ್ಲಾ ಗಮನಿಸಿದ ನಿಂಗಣ್ಣನ ಹೆಂಡ್ತಿ ಮಲ್ಲಮ್ಮನಿಗೆ ತನ್ನನ್ನೇ ನಂಬಿಕೊಂಡು ಕಾಸಿಗೆ ಬಂದಿದ್ದಾನೆ ಎಂದು ಅವಳ ಮನಸು ಕರಗಿ ಎರಡು ಮಾತನಾಡಿದಳು: 'ಎಲ್ಲೂ ಹುಟ್ಟದಿದ್ದಾಗ ನೀನು ನನ್ತಕೆ ಬತ್ತಿಯ' ಎಂದು ದುಂಡಗೆ ಸೀರೆ ಸುತ್ತಿ ಕಟ್ಟಿದ್ದ ಬಾಳೆಕಾಯನ್ನ ಸರಿಸಿ ಐವತ್ತು ರೂಪಾಯಿ ಹೊರತೆಗೆದು ಅವನಿಗೆ ಕೊಡುತ್ತಾ 'ಉಳಿದ ಚಿಲ್ಲರೆ ತಗಂಬಾ' ಎಂದಳು.

(ಸಶೇಷ)